ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) –

ಅ) ಹೌದು

ಆ) ಹೌದು

ಇ) ಹೌದು

ತಯಾರಿಸಲಾಗಿದೆ

706 (1204) ಶ್ರೀ ಬಾಲರಾಜ್ ಎಸ್ (ಕೊಳ್ಳೆಗಾಲ) –

ತೋಟಗಾರಿಕೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ರಾಜ್ಯದಲ್ಲಿ ತೋಟಗಾರಿಕಾ ಇಲಾಖೆಯಿಂದ ರೂಪಿಸಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳು ಯಾವುವು (ವಿವರ ನೀಡುವುದು) ,

ಆ) ಈ ಇಲಾಖೆಗೆ ಬಿಡುಗಡೆಯಾದ ಅನುದಾನವೆಷ್ಟು ,

ಇ) ಇಲಾಖೆಯಿಂದ ಕೊಳ್ಳೇಗಾಲ ಕ್ಷೇತ್ರಕ್ಕೆ ರೂಪಿಸಿರುವ ಯೋಜನೆಗಳು ಯಾವುವು,

ಈ) ಈ ಯೋಜನೆಗಳು ಯಾವ ಹಂತದಲ್ಲಿವೆ ,

ಉ) ಇಲಾಖಾ ಕಾರ್ಯಕ್ರಮಗಳು ಯಶಸ್ವಿಯಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಊ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಗಳ ಯೋಜನೆ/ಕಾರ್ಯಕ್ರಮಗಳು ರೂಪಿಸಲು ಗುರುತಿಸಲಾದ ಸ್ಥಳಗಳಾವುವು ,

ಋ) ಈ ಯೋಜನೆಗಳು ಸಾರ್ವಜನಿಕರಿಗೆ ಉಪಯೋಗಿಸುವಂತೆ ಸ್ಥಳೀಕರಣಗೊಳಿಸಲಾಗುವುದೇ ?

ಶ್ರೀ ಶಶಿಕಾಂತ ಅ ನಾಯಕ್ (ತೋಟಗಾರಿಕೆ ಸಚಿವರು) –

ಅ) ರಾಜ್ಯದಲ್ಲಿ ತೋಟಗಾರಿಕಾ ಇಲಾಖೆಯಿಂದ ರೂಪಿಸಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳ ವಿವರ ಈ ಕೆಳಕಂಡಂತಿವೆ

ನಿರ್ದೇಶನ ಮತ್ತು ಆಡಳಿತ

1 ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳಿಗಾಗಿ ಹನಿ ನೀರಾವರಿ ಯೋಜನೆ

2 ರೈತರ ಕ್ಷೇತ್ರಗಳಲ್ಲಿ ಇಸ್ರೇಲಿ ತಂತ್ರಜ್ಞಾನದ ಅಳವಡಿಕೆಗಾಗಿ ಪ್ರಾಯೋಗಿಕ ಯೋಜನೆ

3 ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ

4 ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ

5 ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರನಿಯಂತ್ರಣ

6 ತೋಟಗಾರಿಕೆ ಕಟ್ಟಡಗಳು

7 ವಿಸ್ತರಣೆ ಮತ್ತು ತರಬೇತಿ

8 ತೋಟಗಾರಿಕೆ ಸಂಸ್ಕರಣೆ

9 ಕರ್ನಾಟಕ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮಕ್ಕೆ ಬೆಂಬಲ

10 ತೋಟಗಾರಿಕೆ ಉದ್ಯಾನವನಗಳು

11 ಸೂಕ್ಷ್ಮ ನೀರಾವರಿ

12 ಮಾರುಕಟ್ಟೆ ಹಾಗೂ ಸಂಗ್ರಹಣಕ್ಕಾಗಿ ಗ್ರಾಮೀಣ ಮೂಲ ಸೌಕರ್ಯ

13 ಹೊಸ ತರಕಾರಿ ತಳಿಗಳನ್ನು ಪರಿಚಯಿಸುವ ಯೋಜನೆ

14 ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ

15 ಅಂತರರಾಷ್ಟ್ರೀಯ ಕೃಷಿ ವ್ಯಾಪಾರ ಮೇಳ

16 ದ್ರಾಕ್ಷಾರಸ ನೀತಿ

17 ಬ್ಯಾಕ್ಟೀರಿಯ ತೊಂದರೆ ಮೇಲೆ ಮುಂದುವರಿದ ಸಂಶೋಧನೆ

18 ತೋಟಗಾರಿಕೆ ಯಾಂತ್ರೀಕರಣ

19 ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜು

20 ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ

21 ಪ್ರಚಾರ ಮತ್ತು ಸಾಹಿತ್ಯ

22 ತೋಟಗಾರಿಕೆ ಕಟ್ಟಡಗಳು

23 ಶೀಥಲ ಗೃಹಗಳ ಸಹಾಯಧನ ಯೋಜನ

24 ರೈತರಿಗಾಗಿ ತರಬೇತಿ

25 ರೈತರಿಗೆ ಸಹಾಯ

26 ಮಂಡಳ ನರ್ಸರಿಗಳ ಅಭಿವೃದ್ಧಿ

27 ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ

28 ತೆಂಗು ಉತ್ಪಾದಕತೆ ಅಭಿವೃದ್ಧಿಗಾಗಿ ಸಮಗ್ರ ಬೇಸಾಯ

29 ರಾಷ್ಟ್ರೀಯ ತೋಟಗಾರಿಕೆ ಮಿಷನ್

30 ವಿಶೇಷ ಘಟಕ ಯೋಜನೆ (ರಾಜ್ಯ)

31 ಗಿರಿಜನ ಉಪಯೋಜನೆ (ರಾಜ್ಯ)

ಆ) 2007–08ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಗೆ ಒಟ್ಟು ರೂ 13307 10 ಲಕ್ಷಗಳ ಅನುದಾನ ನಿಗದಿಯಾಗಿರುತ್ತದೆ

ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರಕ್ಕೆ ರೂಪಿಸಲಾದ ಯೋಜನೆಗಳು ಕೆಳಕಂಡಂತಿವೆ

1 ತೋಟಗಾರಿಕೆ ಬೆಳೆಗಳಿಗಾಗಿ ಹನಿ ನೀರಾವರಿ ಯೋಜನೆ

2 ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ

3 ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ

4 ತೋಟಗಾರಿಕೆ ಕಟ್ಟಡಗಳು

5 ತೆಂಗು ಉತ್ಪಾದಕತೆ ಅಭಿವೃದ್ಧಿಗಾಗಿ ಸಮಗ್ರ ಬೇಸಾಯ

6 ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ

7 ಸಾರ್ಮಧ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ

8 ರಾಷ್ಟ್ರೀಯ ತೋಟಗಾರಿಕೆ ಮಿಷನ್

9 ಸೂಕ್ಷ್ಮ ನೀರಾವರಿ

ಈ) ಈ ಯೋಜನೆಗಳನ್ನು 2006–07ನೇ ಸಾಲಿನಲ್ಲಿ 8 57 ಲಕ್ಷ ರೂ ಗಳನ್ನು ವಿನಿಯೋಗಿಸಿ ಜಾರಿಗೊಳಿಸಲಾಗಿದೆ

ಉ) ಇಲ್ಲ

ಊ) ಆಯಾ ಯೋಜನೆಗಳ ಮಾರ್ಗಸೂಚಿಗಳನ್ನು ಅನುಸರಿಸಿ ತಾಲ್ಲೂಕುಗಳ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ತೋಟಗಾರಿಕೆಗೆ ಯೋಗ್ಯ ಸ್ಥಳಗಳನ್ನು ಗುರುತಿಸಿ ಗ್ರಾಮ ಸಭೆಗಳ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆಮಾಡಲಾಗುತ್ತಿದೆ

ಋ) ಹೌದು

707 (824) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) –

ಕೃಷಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) 2004 ರಿಂದ 2007ನೇ ಜೂನ್‌ವರೆಗೆ ರಾಜ್ಯದಲ್ಲಿಯ ರೈತರ ಆತ್ಮಹತ್ಯೆ ಪ್ರಕರಣಗಳೆಷ್ಟು , (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು) ,

ಆ) ಇವುಗಳಲ್ಲಿ ಪರಿಹಾರ ಧನವನ್ನು ಪಡೆದಿರುವ ರೈತ ಕುಟುಂಬಗಳೆಷ್ಟು , (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು) ,

ಇ) ರೈತರ ಆತ್ಮಹತ್ಯೆ ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?